ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೮೬-೮೭ರಲ್ಲಿ ನಾಲ್ಕು ಕಂತುಗಳಲ್ಲಿ ಮತ್ತು ೧೯೮೭-೮೮ರಲ್ಲಿ ೨ ಕಂತುಗಳಲ್ಲಿ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದೇ ರೀತಿ ವಾಹನ ತೆರಿಗೆ ಪರಿಹಾರ ಧನವನ್ನು ಸಹ ಪ್ರತಿ ವರ್ಷ ದಿನಾಂಕ ೨೪-೩-೧೯೮೦ರ ಸರ್ಕಾರಿ ಆದೇಶದಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ತಡೆಹಿಡಿಯಲಾದ ಪ್ರಶ್ನೆ ೧೬೫೫

ಶ್ರೀ ಬಿ. ಲಕ್ಕಪ್ಪ.—೧೯೮೬-೮೭ ಮತ್ತು ೧೯೮೭-೮೮ನೇ ಸಾಲಿಗೆ ಎರಡು ಕಂತುಗಳಲ್ಲಿ ಆಕ್ಟ್ರಾಯ್ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆ. ಕೊಟ್ಟಿರತಕ್ಕ ಗ್ರಾಂಟ್ ಇನ್ನೂ ಪುರಸಭೆಗಳಿಗೆ ತಲುಪಿಲ್ಲ. ತಲುಪದಿರುವುದಕ್ಕೆ ಅಡ್ಡದಾರಿ ಏನಾದರೂ ಇದೆಯೇ ? ಕೊಟ್ಟ ಗ್ರಾಂಟ್ ನೇರವಾಗಿ ಅಲ್ಲಿಗೆ ತಲುಪಬೇಕು. ಮಾನ್ಯ ಸಚಿವರಿಗೆ ಒಂದು ತಿಂಗಳ ಕೆಳಗೆ ಮುನಿಸಿಪಲ್ ಅಧ್ಯಕ್ಷರು ಮತ್ತು ನಾವೆಲ್ಲ ಸೇರಿ ಪುರಸಭೆಗಳಿಗೆ ತುಂಬಾ ತೊಂದರೆ ಇರುವುದರಿಂದ ಬೇಗ ಗ್ರಾಂಟ್‌ನ್ನು ಬಿಡುಗಡೆ ಮಾಡಿ ಎಂದು ಒಂದು ಮನವಿ ಕೊಟ್ಟಿವು. ಇನ್ನೂ ತಲುಪಿಲ್ಲ. ಇವರು ತಲುಪಿದೆ ಎಂದು ಹೇಳುತ್ತಿದ್ದಾರೆ. ಬೇರೆ ಅಡ್ಡದಾರಿ ಏನಾದರೂ ಇದ್ದರೆ ತಲುಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಯಾವ ಅಡ್ಡದಾರಿಯೂ ಇಲ್ಲ. ಬಾಕಿ ಉಳಿದಂತಹ ಎಲ್ಲಾ ಪುರಸಭೆಗಳಿಗೂ (ನಿಮ್ಮದನ್ನು ಸೇರಿಸಿ) ೧,೨೫,೪೯೨ ರೂಪಾಯಿಗಳನ್ನು ನಿನ್ನೇ ಕಂತಾಗಿ ಕಳುಹಿಸಿ ಕೊಟ್ಟಿದ್ದೇವೆ. ಯಾವುದೂ ಬಾಕಿ ಇಲ್ಲ' ಪೂರ್ಣ ಹೋಗಿದೆ.

ಅಧ್ಯಕ್ಷರು.—ಈಗ ಗೈರು ಹಾಜರಾದವರನ್ನು ಮತ್ತೊಮ್ಮೆ ಕರೆಯುತ್ತೇನೆ. ಸುಮಾ ವಸಂತ ಅವರ ಪ್ರಶ್ನೆ ಮುಂದೆ ಹೋಗಿದೆ.

ಕೆಮ್ಮಣ್ಣುಗುಂಡಿಯಲ್ಲಿರುವ ರೋಪ್‌ವೇ

೨೬೫೫. ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಣ್ಣೀರು ಬಯಲು ಮತ್ತು ಕೆಮ್ಮಣ್ಣುಗುಂಡಿಯ ಮಧ್ಯೆ ಆದಿರು ಸಾಗಣಿಕೆಗಾಗಿ ನಿರ್ಮಿಸಿದ್ದ ರೋಪ್‌ವೇ ಕೆಲಸಕ್ಕೆ ಯೋಗ್ಯವಾಗಿರುವುದು ನಿಜವೇ?

ಆ) ಇದನ್ನು ಪ್ರವಾಸೋದ್ಯಮ ಉದ್ದೇಶಗಳಿಗೆ ಬಳಸಬಹುದೆಂಬ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು)—

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಇದು ಪ್ರವಾಸಿಗರನ್ನು ಆಕರ್ಷಣೆ ಮಾಡತಕ್ಕ ಜಾಗವಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡರೆ ತುಂಬಾ ಅನುಕೂಲವಾಗುತ್ತದೆ. ಆದಕ್ಕೆ ಮಂತ್ರಿಗಳನ್ನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಸರ್ಕಾರದ ಪರವಿಂದ ಇದಕ್ಕೇನಾದರೂ ಬಂದು ಯೋಜನೆಯೆನ್ನು ಹಾಕಿ ಫಲಕಾರಿಯಾಗಿ ಮಾಡಬೇಕು ಎಂದು.

ಶ್ರೀ ಎಂ. ಪಿ. ಪ್ರಕಾಶ್.—ವಿ.ಎಸ್.ಐ.ಎಲ್.ನವರು ಅದನ್ನು ಪ್ರವಾಸೋದ್ಯಮ ಇಲಾಖೆಗೆ ಕೊಡುತ್ತೇವೆಂದು ಪ್ರಸ್ತಾವನೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅವರು ಹಾಕಿರುವ ಅಂದಾಜು ಒಂದು ಕೋಟಿ ಳಟ ಲಕ್ಷ ರೂಪಾಯಿಗಳು. ೧೯೮೮-೮೯ನೇ ಸಾಲಿಗೆ ಇಡೀ ಇಲಾಖೆಗೆ ಕೊಟ್ಟಿರತಕ್ಕ ಆಯವ್ಯಯ ಒಂದು ಕೋಟಿ ೫೦ ಲಕ್ಷ ರೂಪಾಯಿ ಮಾತ್ರ. ಆದರಲ್ಲಿ ಒಂದು ಕೋಟಿ ಳಟ ಲಕ್ಷ ರೂಪಾಯಿಗಳನ್ನು ಇದು ಒಂದಕ್ಕೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಕಡಿಮೆ ಹಣಕ್ಕೆ ಕೊಡುವ ಬಗ್ಗೆ ವ್ಯವಹಾರ ಮಾಡುತ್ತಿದ್ದೇವೆ. ಅವರಿಂದ ಸಹಾನುಭೂತಿಯ ಪ್ರತಿಕ್ರಿಯೆ ಬಂದರೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ. ಪಿ. ಪ್ರಕಾಶ್. – ಒಂದು ಕೋಟಿ ಮುವತ್ತ ಮೂರು ಲಕ್ಷ ರೂಪಾಯಿ ಇದಕ್ಕೆ ಖರ್ಚು ಮಾಡಲು ಸಾಧ್ಯವಾಗುವುದಿಲ್ಲ. ಇದನ್ನು ಸ್ವಲ್ಪ ಕಡಿಮೆ ಪಡಿಸಬೇಕೆಂದು ಅಥವಾ ಕಂತಿನ ರೂಪದಲ್ಲಿ ತೆಗೆದುಕೊಳ್ಳಬೇಕು ಎಂದು ವಿ.ಐ.ಎಸ್.ಎಲ್. ಅವರಿಗೆ ಕೇಳಿದ್ದೇವೆ. ಅವರಿಂದ ಸಹಕಾರಿಯಾದ ಪ್ರತಿಕ್ರಿಯೆ ಬಂದ ತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಇದು ಬಹಳ ಪ್ರಾಮುಖ್ಯವಾದುದು. ವಿ.ಐ.ಎಸ್.ಎಲ್. ನವರನ್ನು ಕೇಳಿದರೆ ಅವರು ಕಡಿಮೆಗೆ ಕೊಡಲು ಒಪ್ಪಿಕೊಳ್ಳುತ್ತಾರೆ. ತಾವು ಇದನ್ನು ಮಾಡಿಸಲೇ ಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಇದು ಪ್ರವಾಸೋದ್ಯಮದ ದೃಷ್ಟಿಯಿಂದ ಬಹಳ ಮುಖ್ಯವಾದುದು ಈ ಕೆಮ್ಮಣ್ಣುಗುಂಡಿ ತಾಣ ಒಂದು ಒಳ್ಳೆಯ ಪ್ರವಾಸಿ ಕೇಂದ್ರ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಬಗ್ಗೆ ವಿ.ಐ.ಎಸ್.ಎಲ್.ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದಾಗ, ಈ ಸಂಸ್ಥೆ ಈಗಾಗಲೇ ೩೭ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ, ಅದುದರಿಂದ ಕಡಿಮೆ ಮಾಡಲು ನಷ್ಟವಾಗುತ್ತದೆಂದು ಕೈಗಾರಿಕಾ ಮಂತ್ರಿಗಳು ಹೇಳಿದ್ದಾರೆ. ಆದರೂ ಪ್ರಯತ್ನವನ್ನು ನಾನು ಮತ್ತೆ ಮಾಡುತ್ತೇನೆಂದು ತಮ್ಮ ಮೂಲಕ ಅರಿಕೆ ಮಾಡುತ್ತೇನೆ.

ಪ್ರಶ್ನೆ ನಂ. ೮೫೯ (೨೪೨೪) ಸದಸ್ಯರು ಹಾಜರಿಲ್ಲ. (ಶ್ರೀ ಶರಣಬಸವ ಪಾಟೀಲ್)

ಪ್ರಶ್ನೆ ನಂ. ೮೬೭ (೨೭೦೪) ಸದಸ್ಯರು ಹಾಜರಿಲ್ಲ. (ಹೆಚ್. ಕೆ. ಕುಮಾರಸ್ವಾಮಿ)

ಅಧ್ಯಕ್ಷರು.—ಶ್ರೀ ಜಿ. ಜಿ. ಜಮಖಂಡಿಯವರ ಪ್ರಶ್ನೆಗೆ ಸಚಿವರು ಟ್ರೆಂ ಕೇಳಿದ್ದಾರೆ. ಮಂಣಿಯವರೇ, ನಿಮ್ಮ ಪ್ರಶ್ನೆಯನ್ನು ವೆಂಕಟರಾಮಯ್ಯನವರು ಈಗಾಗಲೇ ಕೇಳಿದ್ದಾರೆ.